ದಿನಾಂಕ : 06.08.2024
ಅಸಲು ದಾವೆ: 9/2021
ಪಿ.ಡಬ್ಲ್ಯೂ: 2

<u>ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

**<u>ಮುಂದುವರೆದ ಪಾಟೀ ಸವಾಲು : 1, 3 ಮತ್ತು 4 ನೇ ಪ್ರತಿವಾದಿಗಳ ಪರ ವಕೀಲರಾದ ಶ್ರೀ ಹೆಚ್.ಎಂ. ರವರಿಂದ :</u>**

ಕಳೆದ ವಾಯಿದೆ ನೀವು ಕ್ರಯ ಪತ್ರವನ್ನು ಹಾಜರು ಪಡಿಸುವುದಾಗಿ ಹೇಳಿದ್ದಿರಿ, ಈ ದಿನ ಸದರಿ ಕ್ರಯ ಪತ್ರವನ್ನು ತಂದಿದ್ದೀರಾ ಎಂದರೆ ಸಾಕ್ಷಿ ದಿನಾಂಕ 03.09.1986 ನೇ ಇಸವಿಯ ಮೂಲ ಕ್ರಯ ಪತ್ರ ಹಾಗೂ ಅದರ ನೋಟರಿ ಪತ್ರವನ್ನು ನ್ಯಾಯಾಲಯದಲ್ಲಿ ಹಾಜರು ಪಡಿಸಿರುತ್ತಾರೆ. ಮೂಲ ಕ್ರಯ ಪತ್ರದೊಂದಿಗೆ ನೋಟರಿ ಪ್ರತಿ ತಾಳೆ ನೋಡಿ ಸರಿ ಇರುವುದನ್ನು ಖಚಿತಪಡಿಸಿಕೊಂಡು ನೋಟರಿ ಪ್ರತಿಯನ್ನು ನಿಶಾನೆ.ಸಿ.1 ಎಂದು ಗುರುತಿಸಲಾಗಿರುತ್ತದೆ. ಮೂಲ ಕ್ರಯ ಪತ್ರವನ್ನು ಸಾಕ್ಷಿಗೆ ವಾಪಾಸ್ಸು ನೀಡಲಾಗಿರುತ್ತದೆ.

ಕಳೆದ ವಾಯಿದೆಯಲ್ಲಿ ನೀವು ಖರೀದಿಸಿರುವ ಸ್ವತ್ತಿನ ವಿಸ್ತೀರ್ಣ ಒಂದು ಎಕರೆ ಒಂದು ಗುಂಟೆ ಎಂದು ಹೇಳಿದ್ದೀರಿ, ನೀವು ಹಾಜರು ಪಡಿಸಿರುವ ನಿಶಾನೆ.ಸಿ.1 ಯಲ್ಲಿ ವಿಸ್ತೀರ್ಣ ಒಂದು ಎಕರೆ ಎಂದು ಬರೆದಿದೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ನನ್ನ ಜಮೀನಿನ ಪೂರ್ವಕ್ಕೆ ದೇಶಹಳ್ಳಿಗೆ ಹೋಗುವ ರಸ್ತೆ ಎಂದು ಚೆಕ್ ಬಂದಿ ಬರೆದಿದೆ ಎಂದರೆ ಸಾಕ್ಷಿ ಹೌದು ದೇಶಹಳ್ಳಿಗೆ ಹೋಗುವ ರಸ್ತೆ ಮತ್ತು ಉಳಿಕೆ ಜಾಗ ಎಂದು ಬರೆದಿದೆ ಎಂದು ಉತ್ತರಿಸುತ್ತಾರೆ. ನಿಶಾನೆ.ಸಿ.1 ರಲ್ಲಿ ಉಳಿಕೆ ಜಾಗ ಎಂದು ಎಲ್ಲಿ ಬರೆದಿದೆ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿ ಕೋಸು ಜಾಗ ಎಂದು ಬರೆದಿದೆ ಎಂದು ಉತ್ತರಿಸುತ್ತಾರೆ. ಕೋಸು ಜಾಗ ಯಾರಿಗೆ ಸೇರಿದ್ದು ಎಂದು ಬರೆಯಲಾಗಿದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಕೋಸು ಜಾಗ ಮತ್ತು ತೋಟದ ರಾಮಣ್ಣನವರ ಜಮೀನು ರಸ್ತೆಯ ನಂತರ ಬರುವುದು ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ರಸ್ತೆಯಿಂದ ಪೂರ್ವಕ್ಕೆ ನಿಮಗೆ ಯಾವುದೇ ಜಾಗ ಮಾರಾಟ ಮಾಡಿಲ್ಲ ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ.

ರಾಜುರವರ ಕ್ರಯ ಪತ್ರವನ್ನು ನಾನು ನೋಡಿರುವುದಿಲ್ಲ. ರಾಜುರವರಿಗೆ ಎಂ.ಸಿ.ಕುಮಾರ್ ರವರು ಜಮೀನು ಮಾರಾಟ ಮಾಡಿರುತ್ತಾರೆ. ಎಂ.ಸಿ.ಕುಮಾರ್ ರವರು ನಿಮ್ಮ ಹಾಗೆಯೇ ಮಹಾಬಲರಾಯರಿಂದ ಜಮೀನು ಖರೀದಿ ಮಾಡಿರುವುದು ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಅವರಿಗೂ ಸಹಾ ಮಹಾಬಲರಾಯರು ಪೂರ್ವದ ರಸ್ತೆಯವರೆಗೆ ಜಮೀನು ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಕುಮಾರ್ ರವರು ಚೆಕ್ ಬಂದಿಯಲ್ಲಿ ನಮೂದಿಸಿರುವ ಜಮೀನಿನ ವಿಸ್ತೀರ್ಣದ ಒಳಗೆ ಸ್ವಾಧೀನದಲ್ಲಿ ಇದ್ದರು ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಕುಮಾರ್ ರವರು ಅವರು ಚೆಕ್ ಬಂದಿ ವ್ಯಾಪ್ತಿಯ ಒಳಗೆ ಸ್ವಾಧೀನದಲ್ಲಿ ಇದ್ದ ಜಮೀನನ್ನು ರಾಜುರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ರಾಜುರವರು ರಸ್ತೆಯಿಂದ ಪೂರ್ವಕ್ಕೆ ಇರುವ ಜಮೀನು ನಮಗೆ ಬರಬೇಕು ಎಂದು ಕೇಸ್ ಹಾಕಿದ್ದಾರೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ರಸ್ತೆಯಿಂದ ಪೂರ್ವಕ್ಕೆ ಇರುವ ಜಮೀನಿನಲ್ಲಿ ಪ್ರತಿವಾದಿಯರು ತಲತಲಾಂತರದಿಂದ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ನೀವು ಮತ್ತು ರಾಜುರವರು ಸ್ನೇಹಿತರಾಗಿರುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮದ್ದೂರು.